REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Date of despatch 20th & 21st of every month

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website : www.karnatakaaryavysyamahasabha.com E-mail : kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೫ ಫೆಬ್ರವರಿ ೨೦೨೨ ಬೆಲೆ : 1 ರೂ. ಪುಟಗಳು : 4 ಸಂಚಿಕೆ : ೨

## ಅಧ್ಯಕ್ಷರ ನುಡಿ



**ಆಡುವುದಕ್ಕಿಂತ ಮಾಡುವುದು ಕಠಿಣ. ಕಾರ್ಯವಿಲ್ಲದೆ ಅಭಿವೃದ್ಧಿ ಸಾಧ್ಯವಾಗದು. ಉದ್ದೇಶವಿಲ್ಲದ ಜೀವನವು ಹುಚ್ಚು ಅಲೆದಾಟ** ಎಂಬ ನುಡಿ ಮುತ್ತುಗಳು ಇಂದಿಗೂ ಅಸಂಖ್ಯಾತರ ಹೃದಯಕ್ಕೆ ನಾಟಿಲ್ಲವೆಂದು ಹೇಳಲು ಬಹಳ ಸಂಕೋಚವಾಗುತ್ತದೆ. ಕಾರಣ, ಇತ್ತೀಚೆಗಷ್ಟೇ ಮಹಾಸಭೆಯ ಚುನಾವಣೆಗಳಿಗಾಗಿ ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಚುನಾವಣಾ ಪ್ರಕ್ರಿಯೆಗಳು ಪ್ರತಿ ಜಿಲ್ಲೆಯಲ್ಲಿಯೂ ಜೋರಾಗಿಯೇ ಇತ್ತು. ಚುನಾವಣೆ ಎಂದಾಕ್ಷಣ ಸಾಮಾನ್ಯವಾಗಿ ಪರ– ವಿರೋದ ಎಂಬುದು ಸಹಜ. ವಿರೋದಿಸುವವರ ಬಗ್ಗೆ ನಿಜವಾಗಿಯೂ ನನಗೆ ಬೇಸರವಿಲ್ಲ, ಆದರೆ ವಿರೋದಕ್ಕಾಗಿ ಬೆರಳೆಣಿಕೆಯಷ್ಟು ಜನ ಆರಿಸಿಕೊಂಡ ವಿಷಯಗಳು ಮನಸ್ಸಿಗೆ ನೋವನ್ನುಂಟುಮಾಡಿತು. ತಾನು ಮಹಾಸಭೆ ನಿರ್ದೇಶಕನಾಗಬೇಕು ಎಂಬ ಆಸೆಗೆ ತನ್ನ ಸ್ಥಾನವನ್ನು ಗಟ್ಟಿಗೊಳಿಸಿ ಕೊಳ್ಳಲು ಬಳಸಿಕೊಂಡ ಕೆಲವು ತಂತ್ರಗಳು, ಮಹಾಸಭೆ ಸಾಧನೆಗಳನ್ನು ಗುರುತಿಸದೆ, ಮಹಾಸಭೆ ಯೋಜನೆಗಳ ಬಗ್ಗೆ ತಿಳಿದು ಕೊಳ್ಳದೆ, ತಾನು ಒಂದು ಬಿಡಿ ಗಾಸು, ಹಿಡಿ ಸಮಯ ನೀಡದೆ ಇರುವ ಕೇವಲ ಬೆರಳೆಣಿಕೆ ವ್ಯಕ್ತಿಗಳು ಮಹಾಸಭೆ ಏನು ಮಾಡಿದೆ? ಎಂದು ಕೇಳುವ ಮೊದಲಿಗೆ ನಾನು ಮಹಾಸಭೆಗೆ ಏನು ಮಾಡಿದೆ? ನನ್ನ ಜಿಲ್ಲೆಯಿಂದ/ನನ್ನ ಊರಿನಿಂದ ಕಳೆದ ಭಾರಿ ಚುನಾಯಿಸಿ ಕಳುಹಿಸಿದ ಅಥವಾ ನಾಮಕರಣಗೊಂಡ ಸದಸ್ಯರು ಮಾಡಿದ್ದಾದರೂ ಏನು? ಅವರಿಂದ ಆಯಾ ಜಿಲ್ಲೆಗೆ – ಊರಿಗೆ ಆಗಿದ್ದಾದರೂ ಏನು? ಎಂಬ ಬಗ್ಗೆ ತಮ್ಮನ್ನು ತಾವು ವಿಮರ್ಶೆ ಮಾಡಿಕೊಂಡಲ್ಲಿ ವಾಸ್ತವಿಕತೆಯ ಅರಿವಾಗುತ್ತದೆ. ಮಹಾಸಭೆ ಯೋಜನೆಗಳು ರಾಜ್ಯದ ಮೂಲೆ ಮೂಲೆಗಳಲ್ಲಿರುವ ನಮ್ಮ ಬಂಧುಳಿಗೆ ಯಾವ ರೀತಿ ತಲುಪುತ್ತಿದೆ ಎಂದು ತಿಳಿಯುತ್ತದೆ. ಮಹಾಸಭೆಯ ಕೆಲಸ ಕಾರ್ಯಗಳು – ಹೊಸ ಹೊಸ ಯೋಜನೆಗಳನ್ನು ಈ ರಾಜ್ಯದ ಸುಮಾರು 1.28 ಲಕ್ಷ ಆರ್ಯವೈಶ್ಯ ಬಂಧುಗಳಿಗೆ ನೇರವಾಗಿ ಅವರವರ ಮೊಬೈಲ್ ಫೋನ್‌ಗಳಿಗೆ ನಮ್ಮ ವೈಶ್ಯಾಂತರಂಗ ಸಾಮಾಜಿಕ ಜಾಲತಾಣಗಳ ಮೂಲಕ ತಲುಪಿಸುವ ವ್ಯವಸ್ಥೆಯಿದೆ. ಇಂತಹ ಯಾವುದೇ ವಿಷಯಗಳ ಬಗ್ಗೆ ಕಿಂಚಿತ್ ತಿಳಿದು ಕೊಳ್ಳದ ಕೆಲವರು **ನಮ್ಮ ಭಾಗಕ್ಕೆ, ನಮ್ಮ ಜಿಲ್ಲೆಗೆ, ನಮ್ಮ ಊರಿಗೆ ಏನು ಮಾಡಿದೆ ಎಂದು ಹೀಗಳೆದಿದ್ದು ಕೇಳಿ ನಿಜಕ್ಕೂ ನನ್ನ ಮನಸ್ಸಿಗೆ ನೋವಾಯಿತು.** ಇಂತಹ ವ್ಯಕ್ತಿಗಳ ಮಾತುಗಳು ಕೇಳಿದಾಗ ಡಿವಿಜಿಯವರ ಕಗ್ಗ ಜ್ಞಾಪಕಕ್ಕೆ ಬರುತ್ತದೆ.

**ದೇವದಾನವರ ರಣರಂಗ ಮಾನವ ಹೃದಯ।**
**ಭಾವ ರಾಗ ಹಟಂಗಳವರ ಸೇನೆಗಳು!!.**

ಬಂದುಗಳೇ ಉತ್ತಮ ಕೆಲಸ ಕಾರ್ಯಗಳನ್ನು ನೋಡಿ ಆನಂದಿಸಲು **ಕಣ್ಣುಗಳಿದ್ದರೆ ಸಾಲದು ಕಣ್ಣೊಳಗೆ ಚೈತನ್ಯ ಶಕ್ತಿ ಇರಬೇಕು.** ಒಡೆದ ಹಾಲಿನಿಂದ ಹೇಗೆ ಬೆಣ್ಣೆ ಬಾರದೋ. ಹಾಗೆಯೇ ಚಂಚಲ ಮನಸ್ಸಿಗೆ ಸಿದ್ದಿಯೂ ಸಿಗದು.

**ಹೊತ್ತು ಹೋಗದ ಮುನ್ನ. ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು, ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು!** ಎಂಬ ಶರಣರ ವಾಣಿ ಸದಾಕಾಲ ನಮ್ಮ ಕಿವಿಯಲ್ಲಿ ಗುಯ್ ಗುಡಬೇಕು. ಅದು ಆಗಬೇಕಾದರೆ, ನಿತ್ಯ ಕೈಲಾದಷ್ಟು ತನು ಮನ ಧನದಿಂದ ಸೇವೆ ಗೈದು, ಸ್ವಾರ್ಥವನ್ನು ತ್ಯಜಿಸಿ ನಿಸ್ವಾರ್ಥವನ್ನು ಬೆಳಗಿದರೆ ಮಾತ್ರ ಜೀವನಕ್ಕೊಂದು ಅರ್ಥ ಬರುತ್ತದೆ. **ಸ್ವಾರ್ಥದ ಬದುಕು ಸಾಕು, ದೇವರ ರಾಜ್ಯವ ಹುಡುಕು, ನಿನ್ನ ಚಿತ್ತ ನಡೆಸಿದ್ದು ಸಾಕು, ದೇವರ ಚಿತ್ತವ ನಡೆಸು, ಮೋಹದ ಬದುಕು ತ್ಯಜಿಸು, ಪ್ರೇಮದ ಬದುಕನ್ನು ನಡೆಸು, ಹಣದಾಸೆ ಸಾಕು, ಬಡವರ ಹಸಿವನ್ನು ನೀಗು, ಪರರ ಹಿತವನ್ನು ಬಯಸು, ಒಳಿತಾದ ಬದುಕನು ಅರಸು, ನಿನ್ನ ಜೀವನಕ್ಕೆ ಅರ್ಥಕೊಡು,** ಮನದಲ್ಲಿ ರಾಶಿ ರಾಶಿಯಾಗಿರುವ ರಾಗ ದ್ವೇಷಗಳನ್ನು ತ್ಯಜಿಸಿ ಕೆಲಸ ಮಾಡಬೇಕು, ಇಲ್ಲವೇ ಕೆಲಸ ಮಾಡುವವರಿಗೆ ಸಹಕಾರ ನೀಡಬೇಕು, ಏನೂ ಮಾಡಲು ಆಗದಿದ್ದರೇ, ಮನಸ್ಸಿಲ್ಲದಿದ್ದರೆ, ಸುಮ್ಮನಿದ್ದರೂ ಸಾಕು ಉತ್ತಮ ಕೆಲಸಗಳಿಗೆ ನೀವು ಸಹಕರಿಸಿದಂತೆ. ಒಂದು ಮರವನ್ನು ಫಲದಿಂದ ಗುರುತಿಸಬೇಕೇ ವಿನ: ಎಲೆಗಳಿಂದಲ್ಲ. **ಪ್ರಜ್ವಲಿಸುವ ದೀಪದ ಬೆಳಕಿನಿಂದ ಕಿರಣಗಳು ಬಹುದೂರ ಸಾಗುವಂತೆ ಲೋಕದಲ್ಲಿ ಸತ್ಕಾರ್ಯಗಳು ಸಹ ಅದೇ ರೀತಿ ಪ್ರಕಾಶಿಸುತ್ತದೆ.** ಬಂಧುಗಳೇ, ಯೋಚಿಸಿ ದೀಪದ ಬೆಳಕಿನೊಂದಿಗೆ ಇರುವಿರೋ? ರಾಗ ದ್ವೇಷಗಳೆಂಬ ವಿಷವನ್ನು ಸೇರಿಸುವಿರೋ ಅವರವರಿಗೆ ಬಿಟ್ಟ ವಿಚಾರ.

ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಅವಶ್ಯವೂ ಹೌದು, ಅನಿವಾರ್ಯವೂ ಹೌದು. ಆದರೆ ಚುನಾವಣೆಗಳನ್ನು ನಡೆಸಬಾರದೆಂದು ಬೆಂಗಳೂರು ನಗರದ ಶ್ರೀ ಗೋವರ್ಧನ್ ಎಂಬುವವರು ದಿನಾಂಕ 19/01/2022ರಂದು ಸಹಕಾರ ಇಲಾಖೆಗೆ ಪತ್ರ ನೀಡಿರುವುದು ಎಷ್ಟು ಸಮಂಜಸ? ಅತೀ ಹೆಚ್ಚು ಕೋವಿಡ್ ಸಾಂಕ್ರಾಮಿಕ ಸಂಧರ್ಭದಲ್ಲಿಯೇ ಈ ರಾಜ್ಯದಲ್ಲಿ ಲಕ್ಷ ಲಕ್ಷ ಸಂಖ್ಯೆಯ ಜನಸ್ತೋಮ ಸೇರಿದ ಜಾತ್ರೆಗಳು,ಸಾವಿರಗಟ್ಟಲೆ ಜನ ಸೇರಿದ ಮದುವೆ, ಶುಭ ಸಮಾರಂಭಗಳು, ರಾಷ್ಟ್ರಾದ್ಯಂತ ಸಾರ್ವತ್ರಿಕ ಚುನಾವಣೆಗಳು, ರಾಜಕೀಯ ಪಕ್ಷಗಳ ಜಾಥಾಗಳು, ಒಕ್ಕಲಿಗ/ಬ್ರಾಹ್ಮಣ ಮಹಾಸಭೆಗಳ ಚುನಾವಣೆಗಳು ಇತ್ಯಾದಿಗಳು ದಿನ: ಪ್ರತಿ ರಾಷ್ಟ್ರಾದ್ಯಂತ ನಡೆಯುತ್ತಿದ್ದರೂ ಶ್ರೀ ಗೋವರ್ಧನ ಎಂಬುವವರಿಗೆ ಬಹುಶ: ತಿಳಿದು ಕೊಳ್ಳಲಾರದಂತಹ ಜಾಣ ಕುರುಡು ಆವರಿಸಿತ್ತು. ಚುನಾವಣೆಗಳನ್ನು ಉತ್ತಮವಾಗಿ ನಿರ್ವಹಿಸಲು ಸಹಕರಿಸುವ ಬದಲಿಗೆ ಚುನಾವಣೆಗಳನ್ನು ನಿಲ್ಲಿಸುವ ವ್ಯರ್ಥ ಪ್ರಯತ್ನದಿಂದ ಸಾಧಿಸಿದ್ದಾದರೂ ಏನು? ಸಮಾಜ ಕಟ್ಟುವ ಹಂಬಲ ಇರುವ ಯಾರೇ ಆದರೂ ಇಂತಹ ಅನರ್ಥದ ಕೆಲಸಗಳನ್ನು ಮಾಡುವುದು ತರವಲ್ಲ. ಸ್ವಾಮೀ, **ಎಲ್ಲಾ ಕೆಲಸವೂ ನಾವು ಬೀಜ ಬಿತ್ತಿದಂತೆ, ಅದು ಬೆಳೆದು ಫಲ ಕೊಡುವುದಲ್ಲದೆ, ಮತ್ತೆ ಬೀಜವನ್ನೊದಗಿಸುತ್ತದೆ. ಒಮ್ಮೆ ಯೋಚಿಸಿ ನೀವು ಫಲ ನೀಡುವ ಮರವಾಗಬೇಕೇ ಅಥವಾ ಕೊಳೆತು ನಾರುವ ಪಾರ್ಥೇನಿಯಂ ಆಗಬೇಕೇ?**

**ತಳದ ಕಸ ತೇಲುತ್ತ ಬಗ್ಗಡವದಹುದು!!**
**ಕಲಕದದದ್ದೆ ಕೊಂಚ ಬಿಟ್ಟಿದೊಡ್ಡದು ಮರಳಿ!**
**ಫಳಿಯಹುದು ಶಾಂತಿಯಲಿ!!ಮಂ!!**

ನಮ್ಮ ಮನಸ್ಸು ಮೇಲೆ ಪ್ರಶಾಂತವಾಗಿದ್ದರೂ ಒಳಗಡೆ ಹೃದಯಾಳದಲ್ಲಿ ಸಾಗರದಾಳದಂತೆ ಅನೇಕ ಹಿತಕರ ಹಾಗೂ ಅಹಿತಕರ ಘಟನೆಗಳನ್ನು ಹುದುಗಿಸಿಟ್ಟುಕೊಂಡಿದೆ. ಅಹಿತಕರ ಘಟನೆಗಳು ಸಂಭವಿಸಿದಾಗ ಮನಸ್ಸಿನಲ್ಲಿ ತರಂಗಗಳು ಎದ್ದು ಮಾತಿನಲ್ಲಿ ಸ್ಫೋಟವಾಗುತ್ತದೆ. ನಮ್ಮ ಮನಸ್ಸೇ ನಮ್ಮ ಶತೃ, ನಮ್ಮ ಮನಸ್ಸೇ ನಮ್ಮ ಮಿತ್ರ. ಸಾಧನೆಯ ಪಥಕ್ಕೆ ಎಡರು ತೊಡರುಗಳೇ ಮೆಟ್ಟಲುಗಳು, ಮೆಟ್ಟಲು ಮೇಲೇರತಾನೇ ಸಾಗಬೇಕು!

**ತತ್ವ ಸಾಕ್ಷಾತ್ಕಾರ ಚಿತ್ತಶುದ್ದಿಯಿನಹುದು।**
**ಚಿತ್ತ ಶೋಧನೆ ಮತಿಚಮತ್ಕಾರವಲ್ಲ**
**ಬಿತ್ತರದ ಲೋಕಪರಿಪಾಕದಿಂ, ಸತ್ಕರ್ಮಾ।**
**ಸಕ್ತಿಯಿಂ ಶುದ್ದತೆಯೊ ॥ಮಂ॥**

ಜೀವನದಲ್ಲಿಯ ಆನಂದ ನಮ್ಮ ಆತ್ಮ ಸ್ವರೂಪ. ನಮ್ಮ ಹೃದಯದಲ್ಲಿಯೇ ಇರುವ ಪರಮಾತ್ಮ ಸ್ವರೂಪ. ಈ ಹೃದಯವೇ ನಮ್ಮ ಮನಸ್ಸು ಬುದ್ದಿಯ ಸ್ಥಾನ. ಈ ಮನಸ್ಸಿನಲ್ಲಿಯೇ ಒಳ್ಳೆಯದು, ಕೆಟ್ಟದ್ದು, ರೊಚ್ಚು, ಹೊಲಸು, ಎಲ್ಲವೂ ತುಂಬಿದೆ. ಇಂತಹ ಮನಸ್ಸಿನ ಕೊಳೆಯನ್ನು ತೊಳೆದು ಸ್ವಚ್ಛ ಮಾಡದೆ ಮೋಕ್ಷವಿಲ್ಲ. ಪ್ರಪಂಚದಲ್ಲಿ ಪರಿಶುದ್ದವಾದ ಕರ್ಮಗಳನ್ನು ಆಸಕ್ತಿಯಿಂದ ಮಾಡಿದರೆ ಮನಸ್ಸಿನ ಶುದ್ದತೆ ತಾನಾಗಿ ಬರುತ್ತದೆ.

ಬಂಧುಗಳೇ, **ಮಾನವ ಕಲ್ಯಾಣವಾಗುವಂತಹ ಜೀವನ ನಮ್ಮದಾಗಲಿ,** ಬಹುಜನಕ್ಕೆ ಸುಖವನ್ನು ಕೊಡುವ ಕೆಲಸವೇ ಶ್ರೇಷ್ಟ ಎಂಬ ತತ್ವದಡಿಯಲ್ಲಿ ಬಾಳಿ ಬೆಳಗೋಣ. ನಮ್ಮ ಬಾಳಿಗೆ ಅರ್ಥ ಕೊಡೋಣ, ಆದರ್ಶಕರಾಗೋಣ?

ಬನ್ನಿ ಬಂಧುಗಳೇ, ಮುಂಬರುವ ಮಹಾಸಭೆಯ ಚುನಾವಣೆಗಳಲ್ಲಿ ಸಕ್ರಿಯರಾಗಿ ಭಾಗವಹಿಸಿ ಇತರರು ನೋಡಿ ಮೆಚ್ಚುವಂತಹ ಚುನಾವಣೆಗಳು ನಮ್ಮದಾಗಲಿ. ಚುನಾವಣೆಗಳ ಹೆಸರಿನಲ್ಲಿ ಕೆಸರೆರಚಾಟ ಮಾಡುವ ಬದಲಿಗೆ ನಾವೇ ಮಾಡಿಕೊಂಡಿರುವ ನಮ್ಮ ಸಂಸ್ಥೆಯ ಸಂವಿಧಾನವನ್ನು ಗೌರವಿಸೋಣ. ಚುನಾವಣೆಗಳು ಆಡಳಿತಕ್ಕೆ ಪೂರಕವಾಗಿರಬೇಕು, ಚುನಾವಣೆಗಳ ಹೆಸರಿನಲ್ಲಿ ಸಮಾಜ ಭಾಗವಾಗಬಾರದು, ನಾವು ಮಾಡಿರುವ ಉತ್ತಮ ಕೆಲಸ ಕಾರ್ಯಗಳಿಂದ ಜನಮನವನ್ನು ಗೆದ್ದು ಆರಿಸಿ ಬರೋಣ, ಚುನಾವಣೆಯಲ್ಲಿ ಗೆಲ್ಲುವ ಕಾರಣಕ್ಕಾಗಿ ಇತರರ ಮೇಲೆ ದೋಷಾರೋಪಣೆ ಮಾಡುವುದರಿಂದ ವಿಶ್ವಾಸಗಳು ಕೆಟ್ಟು ಸಮಾಜದಲ್ಲಿ ಒಡಕುಗಳು ಪ್ರಾರಂಭವಾಗುತ್ತದೆ. ಚುನಾವಣೆಗಳ ಜೊತೆ ಜೊತೆಗೆ ಸಮಾಜವನ್ನು ಸಂಘಟಿತವಾಗಿ ಕರೆದೊಯ್ಯಬೇಕಾದ ಜವಾಬ್ದಾರಿ ನಮ್ಮದಾಗಿದೆ. ಇಷ್ಟಾರ್ಥಗಳನ್ನು ಈಡೇರಿಸುವ ಮಹಾಶಿವರಾತ್ರಿ ನಿಮಗೆಲ್ಲರಿಗೂ ಒಳಿತನ್ನುಂಟುಮಾಡಲಿ

**ಆರ್ ಪಿ ರವಿಶಂಕರ್**
**ಅಧ್ಯಕ್ಷರು**

## ಲ್ಯಾಪ್‌ಟಾಪ್‌ಯೋಜನೆ–21–22

| ವಿದ್ಯಾರ್ಥಿ ಹೆಸರು | ತಂದೆ ಹೆಸರು | ಊರು |
|---|---|---|
| ವಂಶಿ ಜೆ ವಿ ಎಸ್ | ಶ್ರೀ ಶ್ರೀನಿವಾಸುಲು | ಯಲಹಂಕ, ಬೆಂಗಳೂರು |
| ವಸಂತ ಪಿ ಆರ್ | ಶ್ರೀ ರವೀಂದ್ರನಾಥ್ ಪಿ.ಎಲ್ | ತ್ಯಾಗರಾಜನಗರ, ಬೆಂಗಳೂರು |
| ಪೂಜಾ ಎಸ್ | ಶ್ರೀ ಶ್ರೀನಿವಾಸ ಗುಪ್ತಾ ಸಿ ಎಸ್ | ಉಲ್ಲಾಳ, ಬೆಂಗಳೂರು |
| ಚೇತನ್ ವಿ | ಲೇ॥ ವಾಸುದೇವಮೂರ್ತಿ ಕೆ ವಿ | ಪೀಣ್ಯ, ಬೆಂಗಳೂರು |
| ಬಾಲಾಜಿ ಪಿ ಯಲಬುರ್ಗಿ | ಶ್ರೀ ಪ್ರಸನ್ನ ಯಲಬುರ್ಗಿ | ಹುಕ್ಕೇರಿ |
| ಗೌತಮ್ ಬಿ | ಶ್ರೀ ಹನುಮಂತಯ್ಯ ಬಿ | ಬಳ್ಳಾರಿ |
| ಮೋಹನ್ ಸಾಯಿ ಚೈತನ್ಯ ಎಸ್ | ಶ್ರೀ ನಂಬೂರಿ ಸತ್ಯನಾರಾಯಣ | ಬಳ್ಳಾರಿ |
| ಶಿವರಾಂ ಎಂ | ಶ್ರೀ ಪುಲ್ಲವರು ಎಂ | ಸಿರಗುಪ್ಪ |
| ವಿನಯ್ ಕುಮಾರ್ ಜಿ ಎನ್ | ಶ್ರೀ ನಾಗರಾಜ ಶೆಟ್ಟಿ ಜಿ ವಿ | ಸುಗೂರು |
| ರಾಹುಲ್ ಕೆ | ಶ್ರೀ ರವಿಪ್ರಕಾಶ್ ಕೆ | ಬಳ್ಳಾರಿ |
| ವಿಶಾಲ್ | ಶ್ರೀ ಪ್ರಕಾಶ್.ಬಿ | ಬಳ್ಳಾರಿ |
| ವೆಂಕಟೇಶ್ ಕೆ ಬಿ | ಶ್ರೀ ಜಯದೀಪ ಕೆ ಬಿ | ಎಮ್ಮಿಗನೂರು |
| ಪ್ರಣವ್ ಎಸ್ | ಶ್ರೀ ಶಿವಕುಮಾರ್ ಎಸ್ | ಬಳ್ಳಾರಿ |
| ಕಿರಣ್ ಬಿ | ಶ್ರೀ ಹನುಮಂತಯ್ಯ ಶೆಟ್ಟಿ ಬಿ | ಕಲ್ಲುಕಂಬ, ಕುರುಗೋಡು |
| ಸಾಯಿ ಚರಿತ ಬಿ | ಶ್ರೀ ಪರಶುರಾಮು ಬಿ | ಬಳ್ಳಾರಿ |
| ಉದಯ ಕುಮಾರ್ ಜಿ | ಶ್ರೀರಾಘವೇಂದ್ರ ಶೆಟ್ಟಿ ಜಿ | ರಾಮಸಾಗರ |
| ಅನುಷ ಟಿ | ಶ್ರೀ ರಮೇಶ್‌ಟಿ | ಬಳ್ಳಾರಿ |
| ವಿಕ್ರಮ್ ಕೆ | ಶ್ರೀ ನಾಗೇಶ್ ಶೆಟ್ಟಿ | ಬಳ್ಳಾರಿ |
| ಹರೀಷ್ | ಶ್ರೀ ವೆಂಕಟೇಶ್ | ದುಬಾಲ್ ಗುಂಡಿ |
| ವಿಶ್ವಾಸ್ ಟಿ ಆರ್ | ಶ್ರೀ ರಾಜೇಂದ್ರ ಟಿ.ಎಲ್ | ತರೀಕೆರೆ |
| ಸುತೇಶ್ ಡಿ ಪಿ | ಪ್ರಸನ್ನ ಗುಪ್ತಾ ಡಿ ವಿ | ಗೌರಿಬಿದನೂರು |
| ಪ್ರಿಯಾಂಕ ಡಿ ಆರ್ | ಶ್ರೀ ರಾಧಾಕೃಷ್ಣ ಡಿ ಎ | ಮಂಚೇನಹಳ್ಳಿ |
| ಸಂದೀಪ್ ಎಸ್ ಎ | ಶ್ರೀ ಅನಂತಪದ್ಮನಾಭಯ್ಯ ಎಸ್ | ಗುಡಿಬಂಡೆ |
| ನಾಗದರ್ಶನ ಎಸ್‌ಎಸ್ | ಲೇ॥ ಶಿವಶಂಕರ್ ಎಂ.ಎಸ್ | ಚಿತ್ರದುರ್ಗ |
| ಭುವನ್ ಎಂ | ಶ್ರೀ ಮಂಜುನಾಥ್ ಶೆಟ್ಟಿ ಎಸ್ | ಹಿರಿಯೂರು |
| ಮಂಜುನಾಥ್ ಎ ಎನ್ | ಶ್ರೀ ನಾಗೇಶ್ ಬಾಬು ಎ ಎನ್ | ಚಿತ್ರದುರ್ಗ |
| ವೆಂಕಟೇಶ್ ಬಿ ಎಸ್ | ಶ್ರೀ ಶ್ರೀನಿವಾಸ್ ಬಿ ಎಲ್ | ಬರಮಸಾಗರ |
| ಪೃಥ್ವಿ ರಾಜ್ ಪಿ | ಲೇ॥ ಪುಟ್ಟರಾಜ ಗುಪ್ತ | ಚಳ್ಳಕೆರೆ |
| ಸುಕೃತ ಸಿ | ಶ್ರೀ ಚಂದ್ರಶೇಖರ್ | ಮಸ್ಕಲ್ |
| ನಿತಿನ್ ಹೆಚ್ ಎಸ್ | ಶ್ರೀ ಸತೀಷ್ ಹೆಚ್.ವಿ | ಹೊಸದುರ್ಗ |
| ರಕ್ಷಿತ್ ಎಂ ಪಿ | ಶ್ರೀ ಪ್ರತಾಪ್ ಕುಮಾರ್ ಎಂ ಆರ್ | ಚಿತ್ರದುರ್ಗ |
| ಹೇಮಂತ್ ಕುಮಾರ್ ಡಿ ವಿ | ಶ್ರೀ ವಿಠಲ್ ಶೆಟ್ಟಿ ಡಿ ಆರ್ | ದಾವಣಗೆರೆ |
| ಭರತ್ ಬಿ ಸಿ | ಶ್ರೀ ಚಂದ್ರಶೇಖರ್ ಶೆಟ್ಟಿ ಬಿ ಎಸ್ | ಬೆಳ್ಳೂಡಿ |
| ಆದಿತ್ಯ ಬಿ ಎಂ | ಶ್ರೀ ಮಂಜುನಾಥ್ ಬಿ ಎಲ್ | ದಾವಣಗೆರೆ |
| ವಾಸವಿ ಜಿ ಎಸ್ | ಶ್ರೀ ಸುರೇಶ್ ಬಿ ಎನ್ | ದಾವಣಗೆರೆ |
| ವಾಸವಿ ಡಿ ಜಿ | ಶ್ರೀ ಗಿರಿಧರ್ ಮೂರ್ತಿ ಎಸ್.ಆರ್ | ದಾವಣಗೆರೆ |
| ಸುರೇಶ್ ಶ್ರೀನಿವಾಸ್ ಇಲ್ಲೂರ್ | ಶ್ರೀ ಶ್ರೀನಿವಾಸ | ಕಲ್ಬುರ್ಗಿ |
| ನೈನಾ ಆರ್ ಗುಪ್ತ | ಶ್ರೀ ರಾಘವೇಂದ್ರ ಗುಪ್ತ | ಕಲ್ಬುರ್ಗಿ |
| ಭಾವನಾ ಎಸ್ | ಶ್ರೀ ಸತೀಷ್ ಎಸ್ ಎಂ | ಕುಶಾಲನಗರ |
| ಶಬರೀಷ್ ಜಿ ಕೆ | ಶ್ರೀ ಕೃಷ್ಣಮೂರ್ತಿ ಜಿ ಆರ್ | ಯಡರೂರು |
| ನಾಗಧೀರಜ್ ಪಿ ಎಸ್ | ಶ್ರೀ ಸುರೇಶ್ ಬಾಬು ಪಿ ಎಸ್ | ಶ್ರೀನಿವಾಸಪುರ |
| ಧನುಷ್ ಡಿ | ಶ್ರೀ ದೀಪಕ್ ಎನ್ ಪಿ | ಮಾಲೂರು |
| ವಿನೋದ್ ಕುಮಾರ್ ಪಿ ಬಿ | ಲೇ॥ ಭದ್ರಾಚಲ.ಪಿ | ಹೊಸಹಳ್ಳಿ |
| ವೈಷ್ಣವಿ ಎಸ್ | ಶ್ರೀ ಬಾಳಪ್ಪ ಶೆಟ್ಟಿ ಎಸ್ | ಕಾರಟಗಿ |
| ಹರ್ಷವರ್ಧನ್ ಎಸ್ | ಶ್ರೀ ಲಕ್ಷ್ಮೀನಾರಾಯಣ | ಕಾರಟಗಿ |
| ಸುನಿಲ್ ಕುಮಾರ್ ಬಿ | ಶ್ರೀ ಹನುಮಂತಯ್ಯ | ಕಿನ್ನಾಳ |
| ಸುಷ್ಮ | ಶ್ರೀ ನಾಗರಾಜ | ಮಲ್ಲಾಪುರ |
| ಅಶ್ವಿನಿ ಎಂ ಎಸ್ | ಶ್ರೀ ಶ್ರೀನಿವಾಸ ಮೂರ್ತಿ ಎಂ ಆರ್ | ಮಂಡ್ಯ |
| ವರ್ಷಿತ ಎಸ್ ಹೆಚ್ | ಶ್ರೀ ಹರೀಷ್ ಬಾಬು ಎಸ್ ಆರ್ | ಹುಣಸುರು |
| ಬಾಲಾಜಿ ಜಿ | ಶ್ರೀ ಗಿರೀಶ್ ಕೆ ಎನ್ | ಮೈಸೂರು |
| ಸತ್ಯ ಸಾಯಿ ಎನ್ | ಶ್ರೀ ಆದಿನಾರಾಯಣ ಎನ್ | ಮೈಸೂರು |
| ಕಾವ್ಯಾಂಜಲಿ ಆರ್ | ಶ್ರೀ ರಾಜಾ ರಾಮಯ್ಯ | ರಾಯಚೂರು |
| ಅವಿನಾಶ್ ಕೆ | ಶ್ರೀ ನಾಗರಾಜ ಕೆ | ಮಾನ್ವಿ |
| ವೆಂಕಟೇಶ್ ಎಂ | ಲೇ॥ ರಾಘವೇಂದ್ರ ಎಂ | ರಾಯಚೂರು |
| ಕಾರ್ತಿಕ್ | ಶ್ರೀ ಸತೀಷ್ | ರಾಯಚೂರು |

| ವಿದ್ಯಾರ್ಥಿ ಹೆಸರು | ತಂದೆ ಹೆಸರು | ಊರು |
|---|---|---|
| ಆದಿಶೇಷ್ ಎನ್ | ಶ್ರೀ ನಾಗೇಂದ್ರ ಕುಮಾರ್ ಆರ್ | ರಾಯಚೂರು |
| ನಿತಿನ್ ಕುಮಾರ್ ಪಿ | ಶ್ರೀ ವೆಂಕಟೇಶ್ ಶೆಟ್ಟಿ ಪಿ | ಕುರ್ಡಿ |
| ರಾಜೀವ್ ಕುಮಾರ್ ಇ | ಶ್ರೀ ಚಂದ್ರಕಾಂತ್ ಶೆಟ್ಟಿ | ಮಾನ್ವಿ |
| ಲಕ್ಷ್ಮೀನಾರಾಯಣ ಪಿ | ಶ್ರೀ ರಮೇಶ್ ಪಿ | ಮಾನ್ವಿ |
| ಈರಣ್ಣ ಕೆ | ಶ್ರೀ ರವಿ ಕೆ | ರಾಯಚೂರು |
| ವರುಣ್ ಎಂ ಆರ್ | ಶ್ರೀ ರಾಮಮೂರ್ತಿ ಎಂ | ತುಮಕೂರು |
| ಸಾಗರ್ ಪಿ ಎಂ | ಶ್ರೀ ಮಲ್ಲಿಕಾರ್ಜುನ ಗುಪ್ತ ಪಿ ಎಸ್ | ಪಾವಗಡ |
| ಪಳವಲ್ಲಿ ಎಸ್ ಆದಿತ್ಯ | ಶ್ರೀ ಶ್ರೀಧರ್ ಪಿ ಎನ್ | ತುಮಕೂರು |
| ಶರಣ್ಯ ಎಂ ಎನ್ | ಶ್ರೀ ನಟರಾಜ ಎನ್ | ದೊಡ್ಡಾಯಲಕುರು |
| ಪಾವನಿ ಕೆ ಎನ್ | ಶ್ರೀ ನಾಗರತ್ನ ಶೆಟ್ಟಿ | ಪಾವಗಡ |
| ಆದರ್ಶ ಎಸ್ ಆರ್ | ಶ್ರೀ ರಾಜಕುಮಾರ್ ಎಸ್ ಎ | ಸಿದ್ಧಾಪುರ |
| ಅಂಬಿಕ ವೈ | ಶ್ರೀ ವೆಂಕಟೇಶ್ ವೈ | ಮಾರಬ್ಬಿಹಾಳ್ |
| ಶಿವಾನಿ ಬಿಜಾಪುರ | ಶ್ರೀ ಹನುಮಂತ ಬಿಜಾಪುರ | ಗುಳೇದಗುಡ್ಡ |
| ಶರಣ್ ಎಂ | ಶ್ರೀ ಮಧುಸೂದನ್ ಎಂ ಪಿ | ಹೊಳೇನರಸೀಪುರ |
| ಪ್ರಶಾಂತ್ ವಿ | ಶ್ರೀ ವೀರಮಣಿ ಎ | ಬೆಂಗಳೂರು |
| ಮೃದುಲ ಎನ್ ಎಸ್ | ಶ್ರೀ ಸೀತಾರಾಂ ಬಾಬು | ಬಸವೇಶ್ವರನಗರ |
| ಪವನ್ ಕುಮಾರ್ ಎನ್ | ಶ್ರೀನಾಗರಾಜ ಶೆಟ್ಟಿ ಸಿ | ಶಿವಮೊಗ್ಗ |
| ಸೃಷ್ಟಿ ಟಿ ಆರ್ | ಶ್ರೀ ರಾಹುಲ್ ಹೆಚ್ ಜೆ | ಶಿವಮೊಗ್ಗ |
| ಊರ್ಷಿತ ಸಿ ಆರ್ | ಶ್ರೀ ರಮೇಶ್ ಸಿ | ಶಿವಮೊಗ್ಗ |

## ಬಡ್ಡಿ ರಹಿತ ಸಾಲ–21–22

| ವಿದ್ಯಾರ್ಥಿ ಹೆಸರು | ತಂದೆ ಹೆಸರು | ಊರು |
|---|---|---|
| ತಿರುಮಲ | ಶ್ರೀ ಗುಂಡಯ್ಯ ಮುದ್ಗಲ್ | ಶಾಪುರ |
| ಅಪೂರ್ವ.ಎಂ | ಶ್ರೀ ಹನುಮಂತ ಶೆಟ್ಟಿ ಎಂ | ಹೊಸಪೇಟೆ |
| ವೈಷ್ಣವಿ ಡಿ ಎಸ್ | ಶ್ರೀ ಸತೀಷ್ ಬಾಬು ಡಿ ಎಸ್ | ಶಿವಮೊಗ್ಗ |
| ನಾಗಸುರಕ್ಷ ಕೆ ಆರ್ | ಶ್ರೀ ರಮೇಶ್ ಕೆ ಎಸ್ | ಶಿವಮೊಗ್ಗ |
| ವಸುಧ ಜಿ ಜೆ | ಲೇ॥ ಜಯಪ್ರಕಾಶ್ ಜಿ ಆರ್ | ಶ್ರೀನಿವಾಸಪುರ |
| ಸನತ್ ವಿ | ಶ್ರೀ ವಿಶ್ವನಾಥ್ ಹೆಚ್ ಕೆ | ಕಮ್ಮಾರಗಟ್ಟೆ |
| ಸಂಜು ಎ | ಶ್ರೀ ಅಜಯ್ ಕುಮಾರ್ ಕೆ ಎಲ್ | ಶ್ರೀರಾಂಪುರ |
| ಸುಜಿತ್ ಪಿ | ಶ್ರೀ ಪ್ರಸನ್ನ ಕುಮಾರ್ ಕೆ | ಆರ್.ಟಿ ನಗರ |
| ಪುನೀತ್ ಡಿ ಎಸ್ | ಶ್ರೀ ಶಂಕರ್ ಡಿ ಎಸ್ | ಮುರುಗಮಲ್ಲ |
| ಹೇಮಂತ್ ಆರ್ | ಶ್ರೀ ರಮೇಶ್ ಆರ್ | ಚಿಂತಾಮಣಿ |
| ನಿತ್ಯಶ್ರೀ ಎಂ ಸಿ | ಶ್ರೀ ಚಂದ್ರಶೇಖರ್ ಎಂ ಎ | ಚಿಂತಾಮಣಿ |
| ಮಾನಸ ಟಿ ಎಂ | ಶ್ರೀ ಮಂಜುನಾಥ್ ಗುಪ್ತಾ ಟಿ ವಿ | ಬಾಗೇಪಲ್ಲಿ |
| ಜಯಾನಂದ ಎನ್ | ಶ್ರೀ ನಂಜುಂಡಸ್ವಾಮಿ ಆರ್ | ಕೊಳ್ಳೇಗಾಲ |
| ದತ್ತಾತ್ರೇಯ ಜಲಕೋಟೆ | ಶ್ರೀ ದಿಲೀಪ್ ಜಲಕೋಟೆ | ಚಿಟಗುಪ್ಪ |
| ಕುಶಾಲ್ ವೈ | ಲೇ॥ ಸುಧಾಕರ್.ವೈ | ಬಳ್ಳಾರಿ |
| ಸಾಯಿ ರಕ್ಷಿತ | ಶ್ರೀ ರಾಮಕೃಷ್ಣ | ಬಳ್ಳಾರಿ |
| ಕಾರ್ತಿಕ್ ಕೆ | ಶ್ರೀ ರವಿಶಂಕರ್ ಕೆ | ಬಳ್ಳಾರಿ |
| ಸುಶಾಂತ್ ಕುಮಾರ್ ಹೆಚ್ | ಶ್ರೀ ಹೆಚ್ ಪಿ ರಾಮಾಂಜನೇಯ | ಬಳ್ಳಾರಿ |
| ನವ್ಯ ಕೆ | ಶ್ರೀ ಗೋಪಾಲ ಶೆಟ್ಟಿ ಕೆ | ಬಳ್ಳಾರಿ |
| ರಾಘವೇಂದ್ರ ಶೆಟ್ಟಿ ಪಿ ಪಿ | ಶ್ರೀ ಪಾಂಡುರಂಗ ಶೆಟ್ಟಿ ಪಿ | ಹೊಸಪೇಟೆ |
| ರಾಧಿಕ ಎಸ್ | ಶ್ರೀ ಶ್ರೀನಿವಾಸ್ ಬಿ | ಯಶವಂತಪುರ, ಬೆಂಗಳೂರು |
| ಸಿರಿಗಮ್ಯ ಎಂ ಎಸ್ | ಶ್ರೀ ಶ್ರೀನಿವಾಸ ಎಂ ಆರ್ | ಹುಳಿಮಾವು, ಬೆಂಗಳೂರು |
| ಆಶಿಶ್ ಕೆ ಎಸ್ | ಶ್ರೀ ಶಕ್ತಿಪ್ರಸಾದ್ ಟಿ ಎ | ಕಾಟನ್‌ಪೇಟೆ, ಬೆಂಗಳೂರು |
| ವಿನಾಯಕ ವೈ | ಶ್ರೀ ಯಮನಪ್ಪ ಜವಳಗೇರಿ | ಮತ್ತಿಕೆರೆ, ಬೆಂಗಳೂರು |
| ಪ್ರಜ್ವಲ್ ಎನ್ ಜೆ | ಶ್ರೀ ಜಯಕುಮಾರ್ ಎನ್ ಎಸ್ | ಹನುಮಂತನಗರ, ಬೆಂಗಳೂರು |
| ಪ್ರತಿಮ ಎಂ | ಶ್ರೀ ವೀರಭದ್ರ ಶೆಟ್ಟಿ ಎಂ | ಮಹಾಲಕ್ಷ್ಮೀಪುರಂ, ಬೆಂಗಳೂರು |
| ರಚಿತ ಎಂ ವಿ | ಶ್ರೀ ವೆಂಕಟೇಶ್ ಎಂ | ಚಿಕ್ಕಲ್ಲಸಂದ್ರ, ಬೆಂಗಳೂರು |
| ಬೊರ್ರ ವಾಸವಿ | ಶ್ರೀ ಬೊರ್ರ ರಾಮಾರಾವ್ | ಮಹಾಲಕ್ಷ್ಮೀ ಲೇಔಟ್, ಬೆಂಗಳೂರು |

# ಅಭಿನಂದನೆಗಳು

## ನಗರ ಸಭೆಗೆ ನಾಮಕರಣ



ಶ್ರೀ ರಾಘವೇಂದ್ರ ಎ.

**ಕೋ**ಟೆಗಳ ನಾಡಾದ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನವರಾದ ಕಳೆದ 35 ವರ್ಷಗಳಿಂದಲೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರಾಗಿರುವ, ರೋಟರಿ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆಗಳಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ, ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿರುವ ಬಿ.ಜೆ.ಪಿ. ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಶ್ರೀ ರಾಘವೇಂದ್ರ ಎ.ರವರ ನಿರಂತರ ಸೇವೆಯನ್ನು ಗುರುತಿಸಿರುವ ಕರ್ನಾಟಕ ಸರ್ಕಾರವು ಇವರನ್ನು ಹಿರಿಯೂರಿನ ನಗರಸಭೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದೆ. ಇವರಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಅಭಿನಂದಿಸುತ್ತದೆ.

## ಕಡೂರು ಪುರಸಭೆಗೆ ನಾಮಕರಣ



ಶ್ರೀ ಸತೀಶ್ ಎಸ್

**ಕ**ಡೂರು ನಗರದ ಸಮಾಜ ಸೇವಕ, ಮಹಾಸಭೆಯ ನಿರ್ದೇಶಕ ಶ್ರೀ ಸತೀಶ್ ಎಸ್‌ರವರನ್ನು ಕಡೂರು ಪುರಸಭೆ ಸದಸ್ಯರನ್ನಾಗಿ ನೇಮಕ ಮಾಡಿ ಘನ ಸರ್ಕಾರವು ಆದೇಶ ಹೊರಡಿಸಿದೆ. ಇವರ ಯೋಜನೆಗಳು ಕಡೂರು ನಗರದ ಅಭಿವೃದ್ಧಿಗೆ ಪೂರಕವಾಗಲೆಂದು ಆಶಿಸಿ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಇವರನ್ನು ಅಭಿನಂದಿಸುತ್ತದೆ.



## ವಾಸವಿ ಜಯಂತಿ ಆಚರಣೆ

ದಿನಾಂಕ: **11–5–2022** ರ ಬುದವಾರ **ವಾಸವಿ ಜಯಂತಿ ಆಚರಣೆ. ಪ್ರತಿಯೊಬ್ಬ ಕುಲಬಾಂಧವರು ವಾಸವಿ ಜಯಂತಿ ಆಚರಣೆಯನ್ನು ಮನೆ–ಮನೆಗಳಲ್ಲಿ, ನಮ್ಮ ದೇವಾಲಯಗಳಲ್ಲಿ ಶ್ರದ್ಧಾ ಭಕ್ತಿಗಳಿಂದ ಧಾರ್ಮಿಕವಾಗಿ ಮಾತ್ರವಲ್ಲದೆ ಆಯಾ ಸ್ಥಳಕ್ಕೆ ಅನುಗುಣವಾಗಿ ಸೇವಾ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ವಾಸವಿ ಜಯಂತಿ ಆಚರಣೆ ಮಹತ್ವ ಪಡೆದುಕೊಳ್ಳುವಂತೆ ಕಾರ್ಯರೂಪಿಸಲು ಮನವಿ.**

# ಉಚಿತ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ






ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುತ್ತಿರುವ ಶ್ರೀ ಅಶೋಕ್ ಹಾರನಹಳ್ಳಿ, ಶ್ರೀ ಮಂಜುನಾಥರಾಜು ಹಾಗೂ ಶ್ರೀ ವಿನೀತ್ ವರ್ಮಾ

ಮಹಾಸಭೆಯ ಪ್ರತಿಷ್ಠಿತ ಯೋಜನೆಗಳಲ್ಲಿ ಒಂದಾದ ವಿದ್ಯಾರ್ಥಿಮಿತ್ರ ಯೋಜನೆ ಅಡಿ ದಿನಾಂಕ: 18-1-2022ರ ಮಂಗಳವಾರ ಸಂಜೆ 5 ಘಂಟೆಗೆ ಮಹಾಸಭೆಯ ಆವರಣದಲ್ಲಿ ನಡೆದ ಉಚಿತ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ ಅದ್ದೂರಿಯಿಂದ ನಡೆಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಜೊತೆಗೆ ಬ್ರಿಗೇಡ್ ಹಾಸ್ಪೆಟಾಲಿಟಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿನೀತ್‌ವರ್ಮಾರವರು ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಮಂಜುನಾಥ್‌ರಾಜುರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸಿದರು.

ಇದೇ ಸಂದರ್ಭದಲ್ಲಿ ಮಹಾಸಭೆಯ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಶ್ರೀ ಅಶೋಕ ಹಾರನಹಳ್ಳಿರವರು ವಿದ್ಯಾರ್ಥಿಗಳಲ್ಲಿ ಕೀಳರಿಮೆ ಉಂಟಾಗಬಾರದು, ಹಿಂದುಳಿದವರ ಪಂಗಡಗಳಿಗೆ ಸೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುವುದೂ ಸಹ ತಕ್ಕದ್ದಲ್ಲವೆಂದು ನಮ್ಮ ಶಕ್ತಿ-ಸಾಮರ್ಥ್ಯಗಳ ಮೇಲೆ ಬೆಳೆಯುತ್ತೇವೆ ಎಂಬ ಆತ್ಮ ವಿಶ್ವಾಸವಿರಬೇಕೆ ವಿನಃ ಸರ್ಕಾರದ ಸವಲತ್ತುಗಳನ್ನು ಅವಲಂಬಿಸದೆ ಪರಸ್ಪರ ವಿಶ್ವಾಸದಿಂದ ನಾವು ಸಂಘಟಿತರಾಗಿ ಬೆಳೆಯಬೇಕೆಂದು ಹಾಗೂ ನಾವು ಮುಂದುವರೆದವರೆಂದು ಹೇಳಿಕೊಳ್ಳುವ ಸ್ವಾಭಿಮಾನ ಇರಬೇಕು. ನಾವು ಸ್ವಂತ ಶಕ್ತಿಯಿಂದ ಮುಂದೆ ಬಂದಲ್ಲಿ ನಮ್ಮ ಅಭಿವೃದ್ಧಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ನಾವು ಸ್ವಾಭಿಮಾನಿಗಳೆಂಬ ಒಂದೇ ಕಾರಣದಿಂದ ಸಮಾಜವು ಹಿಂದಿನಿಂದಲೂ ಆರ್ಯವೈಶ್ಯರನ್ನು ಮತ್ತು ಬ್ರಾಹ್ಮಣರನ್ನು ಗೌರವಿಸುತ್ತಾ ಬಂದಿದೆ. ಪುರಾಣ ಕಾಲದಿಂದಲೂ ಬ್ರಾಹ್ಮಣರಿಗೂ ಆರ್ಯವೈಶ್ಯ ಸಮುದಾಯಕ್ಕೂ ಅವಿನಾಭಾವ ಸಂಬಂಧವಿದೆ. ಹಿಂದೂ ಸನಾತನ ಧರ್ಮದ ಬೆನ್ನೆಲುಬೆ ಆರ್ಯವೈಶ್ಯ ಸಮಾಜ. ಮಾನವ ಸಂಬಂಧಗಳನ್ನು ವೃದ್ಧಿಸುವಂತಹ ಕೆಲಸಗಳಾಗಬೇಕಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಮತ್ತಷ್ಟು ಹೆಚ್ಚು ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಅಧ್ಯಕ್ಷರಾದ
ಶ್ರೀ ಅಶೋಕ್ ಹಾರನಹಳ್ಳಿರವರಿಗೆ ಗೌರವ ಸಮರ್ಪಣೆ

ಲ್ಯಾಪ್‌ಟಾಪ್‌ಗಳನ್ನು ವಿತರಿಸಿ ಮಾತನಾಡಿದ ಬ್ರಿಗೇಡ್ ಗ್ರೂಪ್ ಮುಖ್ಯಸ್ಥರಾದ ಶ್ರೀ ವಿನೀತ್‌ವರ್ಮಾರವರು ಮಾತನಾಡಿ ಯಶಸ್ಸು ಎಂಬುದು ಒಂದೇ ರಾತ್ರಿಯಲ್ಲಿ ಸಿಗುವಂತದ್ದಲ್ಲ, ತಮ್ಮ ನಿರಂತರ ಪರಿಶ್ರಮದಿಂದ ದೊರೆಯುವಂತಹುದು, ಅಂತಹ ಯಶಸ್ಸಿನ ರೂವಾರಿಗಳು ನೀವಾಗಬೇಕೆಂದು ವಿದ್ಯಾರ್ಥಿಗಳಿಗೆ ಕಿವಿ ಮಾತುಗಳನ್ನು ಹೇಳಿದರು.

ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ಮಂಜುನಾಥ್‌ರಾಜು ರವರು ವಿದ್ಯಾರ್ಥಿಗಳು ರಾಜಕೀಯ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಬೇಕು. ವಿದ್ಯಾವಂತರ ಆಗಮನದಿಂದ ಮಾತ್ರವೇ ರಾಜಕೀಯ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆ ಸಾಧ್ಯ. ಇಂದು ಲ್ಯಾಪ್‌ಟಾಪ್ ಪಡೆದುಕೊಂಡ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ನೀವೂ ಸಹ ನಾಲ್ಕಾರು ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಶಕ್ತಿಯನ್ನು ವೃದ್ಧಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿ ಮಹಾಸಭೆಯ ಯೋಜನೆಗಳನ್ನು ಶ್ಲಾಘಿಸಿದರು.

ಈ ಕಾರ್ಯಕ್ರಮದಲ್ಲಿ 64 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು. ಉಳಿದ ವಿದ್ಯಾರ್ಥಿಗಳಿಗೆ ಅವರವರ ಸ್ಥಳಕ್ಕೆ ಕಳುಹಿಸಿಕೊಡಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು. ಇದರೊಂದಿಗೆ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ ಮುಕ್ತಾಯವಾಯಿತು.






ಮಹಾಸಭೆಯಿಂದ ಗೌರವ ಸ್ವೀಕರಿಸುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ಶ್ರೀ ಮಂಜುನಾಥರಾಜುರವರು,
ಬ್ರಿಗೇಡ್ ಗ್ರೂಪ್‌ನ ಮುಖ್ಯಸ್ಥರಾದ ಶ್ರೀ ವಿನೀತ್ ವರ್ಮಾ ಹಾಗೂ ಶ್ರೀಮತಿ ಆರತಿ ಕುರಗೈಲು

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಪಿ. ದೇವೆಂದ್ರಪ್ಪ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಕೊಪ್ಪಳ ಜಿಲ್ಲಾಧ್ಯಕ್ಷರಾದ ಮತ್ತು ಕೊಪ್ಪಳ ಜಿಲ್ಲೆಯ ಆರ್ಯವೈಶ್ಯ ಸಂಘದ ಅಧ್ಯಕ್ಷರು ಹಾಗೂ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದ ಸನ್ಮಾನ್ಯ **ಶ್ರೀ ಪಿ. ದೇವೆಂದ್ರಪ್ಪ**ರವರು ದಿನಾಂಕ: 04-02-2022 ರಂದು ಇಹಲೋಕ ತ್ಯಜಿಸಿರುತ್ತಾರೆ. ಶ್ರೀಯುತರು ತಮ್ಮ ಜೀವಿತಾವಧಿಯಲ್ಲಿ ಸಮಾಜಕ್ಕೆ ಮಾಡಿದ ಸೇವೆಯನ್ನು ಸ್ಮರಿಸಿ, ಶ್ಲಾಘಿಸಿ ಇವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ಭಗವತಿ ಶ್ರೀ ವಾಸವಿ ದೇವಿ ಇವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಮಹಾಸಭೆ ಕೋರುತ್ತದೆ.

---

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ 2009-2015ರ ಅವಧಿಯಲ್ಲಿ ಮಹಾಸಭೆ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ ಹಾಸನ ಜಿಲ್ಲೆಯ **ಶ್ರೀ ದುರ್ಗಪ್ಪ ಶೆಟ್ಟಿ**ಯವರು ದಿನಾಂಕ: 22-01-2022 ರಂದು ದೈವಾದಿನರಾಗಿರುತ್ತಾರೆ. ಶ್ರೀಯುತರು ತಮ್ಮ ಸೇವಾ ಅವಧಿಯಲ್ಲಿ ಸಮಾಜಕ್ಕೆ ನೀಡಿರುವ ಸೇವೆಯನ್ನು ಸ್ಮರಿಸಿ, ಅವರ ಆತ್ಮಕ್ಕೆ ಶಾಂತಿಯನ್ನು, ಸದ್ಗತಿಯನ್ನು ಕೋರುತ್ತಾ, ಮೃತರ ಕುಟುಂಬ ವರ್ಗಕ್ಕೆ ದುಃಖ ಸಹಿಸಿಕೊಳ್ಳುವ ಶಕ್ತಿಯನ್ನು ಕುಲಮಾತೆ ಶ್ರೀ ವಾಸವಿ ದೇವಿ ಕರುಣಿಸಲೆಂದು ಮಹಾಸಭೆ ಪ್ರಾರ್ಥಿಸುತ್ತದೆ



ಶ್ರೀ ದುರ್ಗಪ್ಪ ಶೆಟ್ಟಿ

---



ಶ್ರೀಮತಿ ಜ್ಯೋತಿ ಚಿದ್ರಿ

ಕರ್ನಾಟಕ ಆರ್ಯವೈಶ್ಯ ಸಮಾಜಕ್ಕೆ ಚಿರ ಪರಿಚಿತರು ಹಾಗೂ ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಬೀದರ್ ಜಿಲ್ಲೆಯ ನಾರಾಯಣರಾವ್ ಎಸ್ ಚಿದ್ರಿರವರ ಧರ್ಮಪತ್ನಿ ಶ್ರೀಮತಿ **ಜ್ಯೋತಿ ಚಿದ್ರಿ** ರವರು ದಿನಾಂಕ 14-01-2022ರಂದು ಅಕಾಲಿಕ ಮರಣಕ್ಕೀಡಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ನಾಡಿನ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಮೃತರ ಆತ್ಮಕ್ಕೆ ಸದ್ಗತಿ ನೀಡಲೆಂದು ಭಗವತಿ ವಾಸವಿ ಮಾತೆಯಲ್ಲಿ ಪ್ರಾರ್ಥಿಸುತ್ತಾ ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಇವರ ಕುಟುಂಬವರ್ಗಕ್ಕೆ ನೀಡಲೆಂದು ಮಹಾಸಭೆ ಕೋರುತ್ತದೆ.

# ಅಭಿನಂದನೆಗಳು



ಡಾ. ಎಂ.ವಿ.ಅಜಯ್ ಕುಮಾರ್
ಎಂ.ಎ., ಎಂ.ಎಲ್.ಐ.ಎಸ್.ಸಿ., ಎಂ.ಫಿಲ್., ಪಿ.ಹೆಚ್.ಡಿ

## ತುಮಕೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪ್ರಧಾನ

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೈ.ಎನ್.ಹೊಸಕೋಟೆಯ ವಾಸಿಗಳಾದ ಶ್ರೀ ಎಂ.ಎ.ವಿಶ್ವನಾಥ್ ಶೆಟ್ಟಿ ಹಾಗೂ ಶ್ರೀಮತಿ ಎಂ.ಎ.ಶೇಷಮಾಂಬ ದಂಪತಿಗಳ ಸುಪುತ್ರರಾದ **ಎಂ.ವಿ.ಅಜಯ್ ಕುಮಾರ್‌ರವರು** ಪಿಹೆಚ್.ಡಿ ಸಂಶೋಧನಾ ಅಧ್ಯಯನದ ಮೂಲಕ **"ಕರ್ನಾಟಕದ ನೀರಿನ ಹಂಚಿಕೆಯ ಆಡಳಿತಾತ್ಮಕ ಕಾರ್ಯವಿಧಾನ: ತುಮಕೂರು ಜಿಲ್ಲೆಯ ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ಮಂಡಿಸಿದ್ದು ತುಮಕೂರು ವಿಶ್ವವಿದ್ಯಾನಿಲಯವು ಇವರಿಗೆ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿದೆ.** ಇವರು ಪ್ರಸ್ತುತ ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಪ್ರೊ.ಉದ್ದಗಟ್ಟಿ ವೆಂಕಟೇಶರವರ ಮಾರ್ಗದರ್ಶನದಲ್ಲಿ ಸಂಶೋಧನಾ ಕಾರ್ಯವನ್ನು ಮಾಡಿರುತ್ತಾರೆ. ತುಮಕೂರು ಜಿಲ್ಲೆಯ ನೀರಿನ ಸಮಸ್ಯೆಗೆ ಸರ್ಕಾರ ಮತ್ತು ಆಡಳಿತವು ಕೈಗೊಳ್ಳಬಹುದಾದ ಅನುಷ್ಠಾನ ಸಾಧ್ಯವಾಗುವ ಪರಿಹಾರ ಕ್ರಮಗಳನ್ನು ಹಾಗೂ ಪಾವಗಡ ತಾಲ್ಲೂಕಿನ ಕುಡಿಯುವ ಹಾಗೂ ಫ್ಲೋರೈಡ್ ನೀರಿನ ಸಮಸ್ಯೆಗೆ ಪರಿಹಾರ ಕ್ರಮಗಳನ್ನು ಈ ಮಹಾಪ್ರಬಂಧದಲ್ಲಿ ತಿಳಿಸಲಾಗಿದೆ. **ಇವರಿಗೆ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಅಭಿನಂದಿಸುತ್ತದೆ.**

ಬೆಂಗಳೂರು ನಗರದ ಪ್ರತಿಷ್ಠಿತ ಪಾರಿತೋಷಕ ಮಳಿಗೆ **Lucent Gifts & Trophies** ರ ಮಾಲೀಕರಾದ ಶ್ರೀ ಎಂ.ಎಲ್ ಆದಿತ್ಯರವರ ಧರ್ಮಪತ್ನಿ ಹಾಗೂ ಬೆಂಗಳೂರು ನಗರದ **A M C** ಕಾಲೇಜಿನಲ್ಲಿ ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ **Assistant Proffeser** ರಾಗಿ ಕಾರ್ಯ ನಿರ್ವಹಿಸುತ್ತಿರುವ **ಶ್ರೀಮತಿ ಹೆಚ್ ಜಿ ಪವಿತ್ರ ಕುಮಾರಿ**ಯವರು, ಡಾ|| ಪಿ ಎನ್ ನರಸೇಗೌಡರವರ ಮಾರ್ಗದರ್ಶನದಲ್ಲಿ ತುಮಕೂರು ವಿಶ್ವವಿದ್ಯಾನಿಲಯ, ತಂತ್ರಜ್ಞಾನ ವಿಭಾಗದಲ್ಲಿ ಮಂಡಿಸಿದ **"Studies on the Phytochemical analysis, Antioxidant & Antimicrobial Properties of some Medical Plants"** ಎಂಬ ಮಹಾಪ್ರಬಂಧಕ್ಕೆ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ನೀಡಿ ಅಧಿಸೂಚನೆಯನ್ನು ಹೊರಡಿಸಿದೆ.

ಡಾ|| ಶ್ರೀಮತಿ ಹೆಚ್ ಜಿ ಪವಿತ್ರ ಕುಮಾರಿಯ ಈ ಸಾಧನೆಯನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಅಭಿನಂದಿಸಿ ಅವರ ಭವಿಷ್ಯ ಜೀವನದಲ್ಲಿ ದೇಶದ ಶಿಕ್ಷಣ ಕ್ಷೇತ್ರಕ್ಕೆ ಹೊಸ ಆಯಾಮ ದೊರೆಯಲೆಂದು ಆಶಿಸುತ್ತದೆ.



ಡಾ. ಹೆಚ್. ಜಿ. ಪವಿತ್ರ ಕುಮಾರಿ



# ಶ್ರೀ ವಾಸವಿ ಗೋಶಾಲೆ

**ಹಳೆ ಪೋಸ್ಟ್ ಆಫೀಸ್ ರಸ್ತೆ , ಬ್ರಾಹ್ಮಣರ ಬೀದಿ, ಹುಣಸೂರು**

## ಗೋದಾನಿಗಳಿಗೆ ಸುವರ್ಣ ಅವಕಾಶ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ ಮೈಸೂರು ಜಿಲ್ಲೆ ಹುಣಸೂರು ನಗರದಲ್ಲಿ ನವೆಂಬರ್ 14 2021 ರಂದು ಪ್ರಾರಂಭವಾದ **ಶ್ರೀ ವಾಸವಿ ಗೋಶಾಲೆ** ಹಸು ಮತ್ತು ಕರುಗಳಿಂದ ಕಂಗೊಳಿಸುತ್ತಿದೆ.

**ಒಂದು ಗೋವನ್ನು ದಾನ ಮಾಡಿದರೆ ಕೋಟಿ ದೇವಾಲಯ ಕಟ್ಟಿದ ಫಲ,** ಒಂದು ಗೋವನ್ನು ರಕ್ಷಿಸಿದರೆ ಲಕ್ಷ ಯಜ್ಞಗಳ ಫಲ, ಒಂದು ಗೋಶಾಲೆ ಕಟ್ಟಿಸಿದರೆ ಸಾಕ್ಷಾತ್ ಜಗನ್ಮಾತೆಯ ಆಲಯ ಕಟ್ಟಿದ ಫಲ, ಗೋಮಯ, ಗೋಮೂತ್ರದಿಂದ ಮಾಡಿದ ವ್ಯವಸಾಯ ದೇಶದ ಪ್ರಗತಿಗೆ ಫಲಪ್ರದ, ಒಂದು ಗೋವಿಗೆ ಆಹಾರ ನೀಡಿದರೆ ಮುಕ್ಕೋಟಿ ದೇವರಿಗೆ ನೈವೇದ್ಯ ನೀಡುವ ಫಲ.

## ಗೋದಾನ ಮಾಡಿ ಗೋದಾನಿಗಳಾಗಿ ಅಥವಾ ಗೋಸೇವೆಗೆ ಸಹಕರಿಸಿ

ಗೋಸಂರಕ್ಷಣೆ, ಗೋಸಾಕಾಣಿಕೆಗೆ ಉದಾರ ವಂತಿಗೆಗಳನ್ನು ನೀಡಿ, ಸಹಕರಿಸಿ. ನಿಮ್ಮ ಮನೆ ಮಂದಿಯ ಹುಟ್ಟು ಹಬ್ಬ, ಮದುವೆ ವಾರ್ಷಿಕೋತ್ಸವಗಳು, ಹಿರಿಯರ ಶ್ರಾದ್ಧಗಳ ಪುಣ್ಯ ದಿನದಂದು ಗೋಮಾತೆಗೆ ಸೇವೆ ಸಲ್ಲಿಸಲು ಮರೆಯದಿರಿ.

**ಒಂದು ದಿನದ ಸೇವೆಗೆ ರೂ.2500/–**

**ಒಂದು ಹೊತ್ತಿನ ಸೇವೆಗೆ ರೂ.1000/–**

### ವಂತಿಗೆಗಳನ್ನು ಕಳುಹಿಸಲು

**KARNATAKA ARYAVYSYA MAHASABHA,**
**CENTRAL BANK OF INDIA**
**GANDHINAGARA BRANCH,**
**A/C NO. : 1112824877,**
**I F S C : CBIN0281198**

ವಂತಿಗೆ ಹಣ ವರ್ಗಾವಣೆ ಆದ ನಂತರ ಕೂಡಲೇ ಮಹಾಸಭೆಯನ್ನು ಸಂಪರ್ಕಿಸಿ, ಮಾಹಿತಿ ನೀಡಿ ರಸೀದಿ ಪಡೆಯಲು ಮರೆಯದಿರಿ.

WhatsApp **9663900439**

**ನಿಮ್ಮ ವಂತಿಗೆಗಳಿಗೆ ಆದಾಯ ತೆರಿಗೆ ಕಲಂ 80G ಅನ್ವಯ ವಿನಾಯಿತಿ ಇರುತ್ತದೆ.**

**ಹೆಚ್ಚಿನ ವಿವರಗಳಿಗೆ**
**ಎ.ಆರ್ ರವಿಕುಮಾರ್,** ಸಂಘಟನಾ ಕಾರ್ಯದರ್ಶಿ
**ಮೊ.ನಂ. 9448004194**

# ಚುನಾವಣೆಗಳನ್ನು ಏಕೆ ಮುಂದೂಡಲಾಯಿತು?

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಕಾರ್ಯಕಾರಿ ಸಮಿತಿಗೆ ಮೇ 2021ರಲ್ಲಿ ಚುನಾವಣೆಗಳನ್ನು ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡ ಸಂದರ್ಭ ಮತ್ತು 2022ರ ಫೆಬ್ರವರಿ 6 ಕ್ಕೆ ಚುನಾವಣೆಗಳನ್ನು ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ದುರಾದೃಷ್ಟವೆಂಬಂತೆ ಕರ್ನಾಟಕ ಘನ ಸರ್ಕಾರವು ಕೋವಿಡ್–19 ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಎರಡೂ ಬಾರಿಯೂ ಸಹಕಾರ ಬ್ಯಾಂಕ್, ಸಹಕಾರ ಸಂಘಗಳು, ಸಂಘಸಂಸ್ಥೆಗಳ ಚುನಾವಣೆಗಳನ್ನು ಮುಂದೂಡಿ ಆದೇಶಗಳನ್ನು ಹೊರಡಿಸಿದ್ದು, ಅನಿವಾರ್ಯವಾಗಿ ಚುನಾವಣೆಗಳನ್ನು ಮುಂದೂಡಬೇಕಾಯಿತು.

ದಿನಾಂಕ 6–2–2022 ರಂದು ಮುಕ್ತವಾದ ಚುನಾವಣೆಗಳನ್ನು ನಡೆಸಲು ಪ್ರತಿ ಜಿಲ್ಲೆಗಳಿಂದಲೂ ಕಾರ್ಯಕರ್ತರು, ಕೆಲವು ಆರ್ಯವೈಶ್ಯ ಮಂಡಳಿಗಳು ಮಹಾಸಭೆ ಕೋರಿಕೆ ಮೇರೆಗೆ ಸರ್ವಸನ್ನದ್ಧರಾಗಿ ಚುನಾವಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಆದರೆ ದಿನಾಂಕ 19–1–2022ರ ಸಂಜೆ ವೇಳೆಗೆ ಘನ ರಾಜ್ಯ ಸರ್ಕಾರದ ವಿಶೇಷ ಸುತ್ತೋಲೆಯಿಂದ ಅನಿವಾರ್ಯವಾಗಿ ಚುನಾವಣೆಗಳನ್ನು ಮುಂದೂಡ ಬೇಕಾಯಿತೇ ಹೊರತು ಇನ್ನ್ಯಾವುದೇ ಕಾರಣಗಳು ಇರುವುದಿಲ್ಲ. ಪ್ರಸ್ತುತ ಇರುವ ಸರ್ಕಾರದ ಆದೇಶದಂತೆ ದಿನಾಂಕ:30–3–2022ರ ವರೆವಿಗೂ ಅಥವಾ ಮುಂದಿನ ಆದೇಶದವರೆವಿಗೂ ಮಹಾಸಭೆಗೆ ಚುನಾವಣೆಗಳನ್ನು ನಡೆಸಲು ಸಾಧ್ಯವಿರುವುದಿಲ್ಲ. ದಯಮಾಡಿ ಮಾನ್ಯ ಸದಸ್ಯರು ಸಹಕರಿಸಲು ಮಹಾಸಭೆ ವಿನಂತಿಸುತ್ತದೆ.

**ವಿಶೇಷ ಸೂಚನೆ:** **ದಿನಾಂಕ: 6–2–2022ಕ್ಕೆ ಚುನಾವಣೆ ಘೋಷಣೆ ಆದಾಗ ಇದ್ದ ನಿಯಮಗಳು/ಮಾನದಂಡಗಳೇ ಮುಂದಿನ ಚುನಾವಣೆಗೂ ಇರುತ್ತದೆ. ಹೊಸ ಸದಸ್ಯರಿಗೆ ಅವಕಾಶ ಇರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.**

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152